it means to us. On this day we should all look beyond our own horizons and stretch our understanding of the value of the Commonwealth.

Its strength lies not just in its numbers—we are a worldwide family of a billion people—but rather in its shared ideals, its emphasis on discussion and its disposition to co-operate. This voluntary organisation, the group in which we can feel Comfortable, is where we can look to our friends for support and understanding and for help in finding the answers to our common problems.

Every year there are many Commonwealth meetings. These bring together all sorts of people—minister and mariners, teachers and traders, pharmacists and farmers—all working together the more easily because they share a common language. Agreement on all subjects may not always be possible but understanding and mutual benefit are always the goals.

At the Commonwealth Heads of Government Meeting in Vancouver last year this search of co-operative effort brought practical decisions in many areas including more help for those in need of food and shelter. I was specially interested in the decision to create a Commonwealth-wide distance learning system at college and university level to bring new opportunities for higher education to our young people and adults throughout the Commonwealth.

For the future, we must listen as well as speak to each other and so learn tolerance through understaning. If we always look for those things which unite us, whether shared hopes or shared fears, the Commonwealth link will come to mean even more to us.

I urge yau to keep faith in the Commonwealth, it can and will continue to serve the world well.

## ನಿಲುವಳಿ ಸೂಚನೆಗಳು (ಅನುಮತಿ ಕೋರಿಕೆ)

### ಬೆಳಗಾವಿಯನ್ನು ೧೦೦ ಕೋಟಿ ರೂಪಾಯಿಂಗಳಿಗೆ ಕೊಂಡುಂಕೊಳ್ಳಲು ಸಿದ್ಧವಾಗಿರುವುದಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ತಿಳಿಸಿರುವ ಬಗ್ಗೆ

ಅಧ್ಯಕ್ಷರು.—ಅಡ್‌ಜರ್ನ್‌ಮೆಂಟ್ ಮೋಷನ್‌ಗಳು ಎರಡು ಬಂದಿವೆ. ಒಂದು ರಾಮಯ್ಯನವರು ಕೊಟ್ಟಿದ್ದಾರೆ, ಇನ್ನೊಂದು ಶ್ರೀಮತಿ ನಾಗರತ್ನಮ್ಮನವರು ಕೊಟ್ಟಿದ್ದಾರೆ. ರಾಮಯ್ಯನವರು ಸ್ವಲ್ಪ ಲೇಟಾಗಿ ಕೊಟ್ಟಿರುವುದರಿಂದ ಮೊದಲು ಕೊಟ್ಟ ಶ್ರೀಮತಿ ನಾಗರತ್ನಮ್ಮನವರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಮಾನ್ಯ ವಿರೋಧ ಪಕ್ಷದ ನಾಯಕಿಯರು).—ಮಾನ್ಯ ಅಧ್ಯಕ್ಷರೇ, ನನಗೆ ಕುಳಿತುಕೊಂಡು ಮಾತನಾಡುವುದಕ್ಕೆ ಪರ್ಮಿಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ನನ್ನ ನಿಲುವಳಿ ಸೂಚನೆ ಏನೆಂದರೆ, ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಆ ರಾಜ್ಯದ ಮುಖ್ಯ ಮಂತ್ರಿಯವರು ಬೆಳಗಾವಿ ನಗರವನ್ನು ೧೦೦ ಕೋಟಿ ರೂಪಾಯಿಗಳಿಗೆ ಕೊಂಡುಕೊಳ್ಳುವುದಕ್ಕೆ ಸಿದ್ಧವಿರುವುದಾಗಿ ತಿಳಿಸಿರುತ್ತಾರೆ. ಈ ರೀತಿ ತಿಳಿಸಿರುವುದರಿಂದ ಉದ್ಭವಿಸಿರುವ ವಿಚಾರದ ಬಗ್ಗೆ ಚರ್ಚಿಸಲು ನಮಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಇದರ ಬಗ್ಗೆ ಚೀಫ್ ಮಿನಿಸ್ಟರ್‌ರವರು ಏನು ಹೇಳುತ್ತಾರೋ ಕೇಳೋಣ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಗಡಿ ವಿಚಾರದಲ್ಲಿ ಯಾವುದೇ ತರವಾದ ಸಮಸ್ಯೆಗಳು ಇರಬಾರದೆನ್ನುವ ಉದ್ದೇಶದಿಂದಲೇ ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಪ್ರದೇಶದ ಬಗ್ಗೆ ತೀರ್ಮಾನ ಕೊಡುವುದಕ್ಕೆ ಮಹಾಜನ್ ಕಮಿಷನ್‌ನನ್ನು ನೇಮಕ ಮಾಡಿದ್ದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ. ಈ ಬಗ್ಗೆ ಹಲವಾರು ಬಾರಿ ಪಕ್ಷ ಭೇದ ಇಲ್ಲದೆ ಏಕವಾಗಿ ಎರಡೂ ಸದನದಲ್ಲಿ ಚರ್ಚೆ ಮಾಡಿ ಮಹಾಜನ್ ವರದಿಯಲ್ಲಿ ಹೇಳಿರುವಂತೆ ಒಪ್ಪಿಕೊಳ್ಳುವುದೆಂದು ನಿರ್ಣಯ ಮಾಡಿದ್ದೇವೆ. ಮಹಾಜನ್ ಕಮಿಷನ್‌ನನ್ನು ನೇಮಕ ಮಾಡುವುದಕ್ಕೆ ಮಹಾರಾಷ್ಟ್ರದ ಆಗಿನ ಕಾಂಗ್ರೆಸ್ ಪಕ್ಷದ ವರ್ಕಿಂಗ್ ಕಮಿಟಿಯವರೂ ಒಪ್ಪಿಗೆಯನ್ನು ಕೊಟ್ಟಿದ್ದರು. ಮಹಾಜನ್ ಕಮಿಷನ್ ವರದಿಯನ್ನು ಒಂದು ಜಡ್ಜ್‌ಮೆಂಟ್ ಆಗಿ ತೆಗೆದುಕೊಳ್ಳಬೇಕೇ ಹೊರತು ಶಿಫಾರಸ್ಸುಗಳೆಂದು ತಿಳಿಯಬಾರದೆಂದು ಸೂಚಿಸಲಾಗಿತ್ತು. ಆ ಒಂದು ತೀರ್ಮಾನಕ್ಕೆ ನಾವೆಲ್ಲರೂ ಬದ್ಧವಾಗಿದ್ದೇವೆ. ಮಹಾಜನ್ ಆಯೋಗದ ತೀರ್ಪನ್ನು ನಾವು ಒಪ್ಪಿದ್ದೇವೆ. ಕೆಲವು ಭಾಗಗಳನ್ನು ಮಹಾರಾಷ್ಟ್ರಕ್ಕೆ ನಾವು ಕೊಟ್ಟು ಕೆಲವು ಭಾಗವನ್ನು ಅವರಿಂದ ಪಡೆಯುವುದು ಈ ತೀರ್ಪಿನಲ್ಲಿ ಇತ್ತು.

ಅಧ್ಯಕ್ಷರು.—ಮಾನ್ಯ ಮಾಮಾಣಿಯವರೇ, ದಯವಿಟ್ಟು ಕುಳಿತುಕೊಂಡು ಬಂಗಾರಪ್ಪನವರು ಹೇಳುತ್ತಿರುವುದನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ನಾವು ಕೆಲವು ಭಾಗಗಳನ್ನು ಬಿಟ್ಟುಕೊಡತಕ್ಕಂಥಾದ್ದು, ಹಾಗೆಯೇ ಅವರೂ ಕೂಡ ಕೆಲವು ಭಾಗಗಳನ್ನು ಬಿಟ್ಟು ಕೊಡತಕ್ಕಂಥಾದ್ದು.....

ಅಧ್ಯಕ್ಷರು.—ಮಾನ್ಯ ರಾಜುಗೌಡರು ಕುಳಿತುಕೊಂಡು ಮಾತನಾಡತಕ್ಕಂಥ ಸದಸ್ಯರ ಮಾತುಗಳನ್ನು ಕೇಳಂತ್ತಾ ಇರಬೇಕು. ನೀವಷ್ಟೇ ಹೇಳುತ್ತಿರುವುದನ್ನು ಇತರರು ಕೇಳಬೇಕು, ಇತರರು ಹೇಳಿದ್ದನ್ನು ನೀವು ಕೇಳಬಾರದೇನು ?

ಶ್ರೀ ಎಸ್. ಬಂಗಾರಪ್ಪ.—ಮಹಾಜನ್ ವರದಿಯ ಪ್ರಕಾರ ಅತೀ ಹೆಚ್ಚು ತಂಬಾಕು ಬೆಳೆಯುವ ತಕ್ಕಂಥ ನಿಪ್ಪಾಣಿ ಪ್ರದೇಶವನ್ನು ಅವರು ತೆಗೆದುಕೊಳ್ಳುತ್ತಾರೆ. ನಮ್ಮ ಕಾಳಿಪ್ರಾಜೆಕ್ಟ್ ಆದಮೇಲೆ ಅದರಿಂದ ಅನುಕೂಲ ಪಡೆಯತಕ್ಕಂಥ ಭಾಗಗಳು ಖಾನಿಜಗಳು ದೊರೆಯುವಂಥ ಮತ್ತಿತರ ಭಾಗಗಳನ್ನು ನಾವು ಕಳೆದುಕೊಳ್ಳಬಹುದು, ಕೆಲವು ಭಾಗಗಳನ್ನು ನಾವು ಪಡೆದುಕೊಳ್ಳಬಹುದು. ಇವೊತ್ತು ನಾವು ಮತ್ತು ಅವರು ಸಹೋದರರಾಗಿರಬೇಕು. ನಾವು ಆಗ ಮಹಾಜನ್ ಆಯೋಗದವರು ಏನು ವರದಿಯನ್ನು ಕೊಡುತ್ತಾರೋ, ಅದನ್ನು ಜಡ್ಜ್‌ಮೆಂಟ್ ಆಗಿ ತೆಗೆದುಕೊಳ್ಳಬೇಕೆಂದು, ಆ ಒಂದು ತೀರ್ಮಾನಕ್ಕೆ ಬದ್ಧರಾಗಿ ಅದಕ್ಕೆ ನಾವೂ ಕೂಡ ನಮ್ಮ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಮಹಾಜನ್ ಆಯೋಗದ ಮುಂದೆ ಸಂಪೂರ್ಣವಾದ ವಿವರಗಳನ್ನು, ಸಾಕ್ಷಿಗಳನ್ನು, ಆಧಾರಗಳನ್ನು, ಹೇಳಿಕೆಗಳನ್ನು, ಕೊಟ್ಟ ಮೇಲೆ ಮಹಾಜನ್‌ರವರು ತಮ್ಮ ವರದಿಯನ್ನು ಕೂಡ ಕೊಟ್ಟರು. ಅವರ ತೀರ್ಪು ಏನು ಬಂದಿದೆ, ಅದರಿಂದ ಒಂದು ಮಾತೃಭಾಷೆ ಮಾತನಾಡತಕ್ಕಂಥ ನಮ್ಮ ಸಹೋದರರಿಗೆ ಕೆಲವು ಸಾರಿ ಕಿರುಕುಳ ಆದರೂ ಕೂಡ ಅದನ್ನು ಸಹೋದರ ಭಾವನೆಯಿಂದ ಸ್ವೀಕಾರ ಮಾಡಬೇಕೆಂದು ನಾವು ಕೂಡ ಹೇಳಿದ್ದೇವೆ. ಮಹಾರಾಷ್ಟ್ರದ ಮಿತ್ರರೂ ಕೂಡ ಸಹೋದರ ಭಾವನೆಯಿಂದ ಇರುತ್ತೇವೆ ಎಂದು ಹೇಳತಕ್ಕಂಥ ಒಂದು ಸಂದರ್ಭ ಒದಗಿ ಬಂತು. ಅದೇನಿದ್ದರೂ ಕೂಡ ಆಯೋಗದವರ ವರದಿಯನ್ನು ಒಪ್ಪಬೇಕು. ಆ ವರದಿಯನ್ನು ಒಂದು ಐತೀರ್ಪಾಗಿ ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ನಾವೆಲ್ಲರೂ ಆಗ ಒಪ್ಪಿಕೊಂಡಿದ್ದು ಆಯಿತು. ಆ ಸಂದರ್ಭದಲ್ಲೆ ಬಹುಶಃ ೧೯೭೩ನೇ ಇಸವಿಯಲ್ಲಿ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎಂದು ಕಾಣುತ್ತದೆ, ಆಗ ನಾನು ಕೂಡ ಈ ಸದನದ ಸದಸ್ಯನಾಗಿದ್ದೆ. ಆ ಸಂದರ್ಭದಲ್ಲಿ ನಮ್ಮ ಸದನದ ಸರ್ವಪಕ್ಷಗಳ ನಿಯೋಗವು ದೆಲ್ಲಿಗೆ ಹೋಗಿ, ಅಂದಿನ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರನ್ನು ಕಂಡು ಬರತಕ್ಕಂಥ ಪರಿಸ್ಥಿತಿ ಬಂತು. ಆ ಪ್ರಯುಕ್ತ ಅವರಿಗೆ ನಮ್ಮ ವಿಚಾರಗಳನ್ನು ಮನದಟ್ಟು ಮಾಡಿಕೊಟ್ಟು ಹಾಗೆಯೇ ಗೃಹಸಚಿವರನ್ನು ಕೂಡ ಕಂಡು ಅವರಿಗೂ ನಮ್ಮ ವಿಚಾರಗಳನ್ನು ಹೇಳಿ, ಬಂದಿದ್ದೆವು. ಆ ಒಂದು ಅಗತ್ಯದ ಕೆಲಸವನ್ನು ನಾವೆಲ್ಲರೂ ಮಾಡಿದ್ದೇವೆ. ನಮ್ಮ ಹಾಗೆ ನಮ್ಮ ಮಹಾರಾಷ್ಟ್ರದ ಮಿತ್ರರೂ ಕೂಡ ಆ ಕೆಲಸವನ್ನು ಮಾಡಿದ್ದಾರೆ. ಅದೇನಿದ್ದರೂ ಹಲವಾರು ಕಾರಣಗಳಿಂದಾಗಿ ಈ ವಿಚಾರವು ಹಾಗೆಯೇ ಉಳಿದಿದೆ. ಅದೇ ಒಂದು ಅಭಿಪ್ರಾಯ ಅದೇ ಒಂದು ಒತ್ತಡ ಕೇಂದ್ರ ಸರ್ಕಾರದ ಮೇಲೆ ನಮ್ಮ ವಿಚಾರದಲ್ಲಿ ಈಗಲೂ ಇದೆ. ನಮ್ಮ ಅಭಿಪ್ರಾಯವನ್ನು ನಿಯೋಗದ ತೀರ್ಪಿನ ವಿಚಾರದಲ್ಲಿ ಬದಲಾವಣೆ ಮಾಡಿಲ್ಲ. ಶಾಂತಿಯುತವಾಗಿ ನಾವೆಲ್ಲರೂ ಸಹೋದರರು ಎನ್ನುವ ಒಂದು ತತ್ವವನ್ನು ಎಲ್ಲರೂ ಇಟ್ಟುಕೊಂಡು ಸಹಬಾಳ್ವೆ ಮಾಡುವ ಒಂದು ಸೂತ್ರವನ್ನು ನಾವೆಲ್ಲರೂ ಇಟ್ಟುಕೊಂಡಿದ್ದೇವೆ. ಯಾರೇ ಆಗಲಿ ಪರದಿಯನ್ನು ಅಲಕ್ಷಿಸಬಾರದು. ಎಲ್ಲರೂ ಸಹೋದರರು ಎಂಬ ಒಂದು ಭಾವನೆಗೆ ಧಕ್ಕೆಯನ್ನು ಯಾರೂ ತರುವಂತಿರಬಾರದು. ಎಲ್ಲರೂ ಸಹೋದರರಾಗಿ ಇರಬೇಕು ಎಂಬ ಒಂದು ತೀರ್ಮಾನಕ್ಕೆ ಬರಬೇಕೆನ್ನುವ ದೃಷ್ಟಿಯಿಂದ, ಪರದಿಯಲ್ಲಿ ಯಾವ ತೀರ್ಮಾನವನ್ನು ಅವರು ಹೇಳಿದ್ದಾರೆ, ಅದನ್ನು ಒಪ್ಪಿಕೊಳ್ಳುವ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಆ ಬಗ್ಗೆ ಒಂದು ನಿರ್ಣಯವನ್ನು ಮಾಡಿ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ನಾವುಗಳು, ಎಲ್ಲಾ ಪಕ್ಷದವರೂ ಕೂಡ, ಗಿಲಿ-ಟಿರ ಒಂದು ತೀರ್ಮಾನಕ್ಕೆ ಬದ್ದರಾಗಿದ್ದೇವೆ. ನಮ್ಮಲ್ಲಿ ಆಗ ಈ ವಿಚಾರದಲ್ಲಿ ಕಾಂಗ್ರೆಸ್, ಬಿ.ಜೆ.ಪಿ., ಸಿ.ಪಿ.ಎಂ., ಸಿ.ಪಿ.ಐ. ಎಂಬಿತ್ಯಾದಿಯಾಗಿ ಯಾವುದೇ ಭೇದ ಇಲ್ಲದೇ ಒಕ್ಕೂರಲಿಂದ ಈ ಒಂದು ವಿಚಾರದಲ್ಲಿ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆದರೆ ಈ ಸಂದರ್ಭದಲ್ಲಿ ಹಲವಾರು ವಿಚಾರಗಳು ಮುಂದೆ ಬಂದಿರತಕ್ಕಂಥದ್ದನ್ನು ನಾವು ಕಂಡಿದ್ದೇವೆ.

ಬೆಳಗಾವಿ ತಮಗೇ ಕೊಡಬೇಕೆನ್ನುವ ಅವರ ವಾದ, ಕೆಲವು ಸಾರಿ ರೈಲ್ವೆ ಹಳಿಯ ಆಧಾರದ ಮೇಲೆ ವಿಭಜನೆ ಮಾಡಿ, ಅರ್ಧಭಾಗವನ್ನು ಅವರಿಗೆ ಬಿಟ್ಟು ಕೊಡಬೇಕೆನ್ನುವ ವಿಚಾರ, ಹೀಗೆ ಹಲವಾರು ವಿಚಾರಗಳನ್ನು ಮಿತ್ರರು ಮಂಡಿಸುತ್ತ ಬಂದಿದ್ದಾರೆ. ಅದರಂತೆ ಕಾಳಿಪ್ರಾಜೆಕ್ಟ್‌ನ ಆ ಕಡೆಯ ಭಾಗ ಅವರಿಗೆ ಪೂರ್ತಿಯಾಗಿ ಬೇಕು ಎನ್ನತಕ್ಕಂಥ ಒಂದು ವಿಚಾರವೂ ಬಂತು. ಅವರು ಹೇಳುವ ಪ್ರಕಾರ ಕಾರವಾರ ಜಿಲ್ಲೆಯ ಬಹುಭಾಗವೇ ಅವರಿಗೆ ಹೊರಟು ಹೋಗಬೇಕಾಗುತ್ತದೆ. ಹಾಗೆಯೇ ಬೆಳಗಾವಿ ನಗರ ಪ್ರದೇಶವನ್ನು ತಮಗೆ ಬಿಟ್ಟುಕೊಡಬೇಕೆನ್ನುವ ಒಂದು ವಾದವನ್ನು ಮೊದಲಿಂದಲೂ ಇಟ್ಟುಕೊಂಡಿದ್ದಾರೆ. ಆ ಬಗ್ಗೆ ಸಾಕಷ್ಟು ಒತ್ತಡವನ್ನು ತಂದಿದ್ದಾರೆ. ಈ ಎಲ್ಲಾ ವಿಚಾರಗಳ ಮಧ್ಯೆ ಸುಮಾರಾಗಿ ಕಾಂಗ್ರೆಸ್ ಸರ್ಕಾರಗಳು ಇದ್ದಾಗ, ಇದ್ದಂಥ ಮುಖ್ಯಮಂತ್ರಿಗಳು...

ಅಧ್ಯಕ್ಷರು.—ತಾವು ಅಡ್ಜರ್ನ್‌ಮೆಂಟ್ ಮೋಷನ್ ಎಂದು ಕೊಟ್ಟಿದ್ದೀರಿ. ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶ ಕೊಟ್ಟರೆ ಎಲ್ಲರೂ ಮಾತನಾಡಬಹುದಾಗಿದೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಕಾರ ಬೇರೆ ಚರ್ಚೆಗೆ ಅವಕಾಶ ಇರಲಾರದು.

ಅಧ್ಯಕ್ಷರು.—ತಾವು ಕೊಟ್ಟಿದ್ದುದು ಅಡ್‌ಜರ್ನ್‌ಮೆಂಟ್ ಮೋಷನ್ ರೆಸ್ಯೂಲೇಶನ್ ಅಲ್ಲ. ತಾವು ಅಡ್ಜರ್ನ್‌ಮೆಂಟ್ ಮೋಷನ್ ನೋಟಿಸ್ ಕೊಟ್ಟಿದ್ದೀರಿ. ಅವರು ಏನು ಹೇಳುತ್ತಾರೋ ಕೇಳೋಣ. ಸರ್ಕಾರದವರು ಒಪ್ಪಿಕೊಂಡರೆ ಯಾವ ರೂಲಿದ್ದಲ್ಲಾದರೂ ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ —ಅವರೂ ಕೂಡ ಚರ್ಚೆಗೆ ಒಪ್ಪಿಗೆ ಕೊಡುವ ಹಾಗಿದ್ದು ತಾವೂ ಕೂಡ ಒಪ್ಪಿಗೆ ಕೊಡುವ ಹಾಗಿದ್ದರೆ ನಾನು ಹೇಳುವುದನ್ನು ಪೂರ್ತಿ ಕೇಳಿ ನಿಲುವಳಿ ಸೂಚನೆಯನ್ನು ಬಿಟ್ಟು ಬೇರೆ ರೂಪದಲ್ಲಿ, ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳತಕ್ಕಂತಹ ವಿಚಾರಕ್ಕೆ ತಾವು ಹೋಗಬಾರದು. ಇದನ್ನು ನಿಲುವಳಿ ಸೂಚನೆಯನ್ನಾಗಿಯೇ ತೆಗೆದುಕೊಳ್ಳಬೇಕು ಬೇರೆ ಯಾವುದೇ ಕಲಮಿನ ಮೇರೆಗೆ ವಿಚಾರ ಮಾಡಬಾರದೆ ದು ನಮ್ಮ ಅಭಿಪ್ರಾಯ ಇದರ ಬಗ್ಗೆ ವಿವರವಾಗಿ ಗಂಟೆ ಗಟ್ಟಲೆ ಮಾತನಾಡಬಹುದು, ಅಂಕಿ ಅಂಶ ಸಹಿತ ಮಾತನಾಡಬಹುದು. ಆ ವಿಚಾರಕ್ಕೆ ನಾನು ಹೋಗುವುದಿಲ್ಲ.

ಅಧ್ಯಕ್ಷರು.—ಈಗ ತಾವು ತಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಎಸ್. ಬಂಗಾರಪ್ಪ.—ನಾನು ಬ್ರೀಫ್ ಆಗಿ ಹೇಳುತ್ತೇನೆ ವಿವರಗಳನ್ನು ಆಮೇಲೆ ತೆಗೆದು ಕೊಳ್ಳೋಣ. ಆ ರಾಜ್ಯದ ಮುಖ್ಯಮಂತ್ರಿಗಳು ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಇದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ಮಾತನಾಡಿದ್ದನ್ನು ನಾವು ಕಂಡಿದ್ದೇವೆ. ಅಲ್ಲಿ ಏನು ಚರ್ಚೆಯಾಯಿತು ಎಂಬುದನ್ನು ಈ ಸದನಕ್ಕೆ ತಿಳಿಸಬೇಕೆಂದು ನಮ್ಮ ರಾಜ್ಯದ ಗಡಿಯ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ, ನಾವು ಪದೇ ಪದೇ ಕೇಳತಕ್ಕಂಥದ್ದು ಉಂಟು, ಗಡಿ ಭಾಗದಲ್ಲಿರತಕ್ಕಂತಹ ಜನತೆಯ ಮಾತೃಭಾಷೆ ಬೇರೆ ಇರಬಹುದು, ಭಾಷೆ ಅಲ್ಪಸಂಖ್ಯಾತರು ಇರಬಹುದು ಅದು ಬೇರೆ ವಿಚಾರ. ಲಿಂಗ್ವಿಸ್ಟಿಕ್ ಮೈನಾರಿಟೀಸ್ ಕಮಿಷನ್‌ನಲ್ಲಿ ಕೂಡ ಇದರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇರಬಹುದು, ಜನತಾ ಸರ್ಕಾರ ಇರಬಹುದು ಭಾಷಾ ಅಲ್ಪ ಸಂಖ್ಯಾತರ ಹಿತರಕ್ಷಣೆಯನ್ನು ನಾವೆಲ್ಲರೂ ಕೂಡ ಕಾಪಾಡಬೇಕಾಗುತ್ತದೆ. ಅವರ ಮಾತೃಭಾಷೆ ಮರಾಠಿ ಭಾಷೆಯಾಗಿರಬಹುದು ಅದು ಬೇರೆ ವಿಚಾರ. ಅವರ ಹಿತರಕ್ಷಣೆಯನ್ನು ಕಾಪಾಡುವ ದೃಷ್ಟಿಯಿಂದ ಕೇಂದ್ರದಲ್ಲಿರುವ ಕಾಂಗ್ರೇಸ್ ಸರ್ಕಾರ ಮತ್ತು ಇಲ್ಲಿರುವ ಜನತಾ ಸರ್ಕಾರ ಕೂಡ ಪ್ರಯತ್ನ ಮಾಡಿದೆ. ನಮ್ಮ ಕಾರ್ಯಕ್ರಮವನ್ನು ಲಿಂಗ್ವಿಸ್ಟಿಕ್ ಮೈನಾರಿಟೀಸ್ ಕಮಿಷನ್‌ನಲ್ಲಿ ಕೂಡ ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ ಮಹಾರಾಷ್ಟ್ರದಲ್ಲಿರುವವರು ಕೂಡ ಪದೇ ಪದೇ ಮಾತನಾಡತಕ್ಕಂಥಾದ್ದನ್ನು ಕಂಡಿದ್ದೇವೆ. ಪತ್ರಿಕಾ ಪ್ರಕಟಣೆಯ ಪ್ರಕಾರ ಹೇಳುವುದಾದರೆ ಮೊನ್ನೆ ತಾನೆ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದಾಗ, ಈ ವಿಷಯದ ಬಗ್ಗೆ ಅನೇಕ ರಾಜಕೀಯ ಪಕ್ಷಗಳು ಪ್ರಸ್ತಾಪ ಮಾಡಿದಾಗ ಅಲ್ಲಿನ ಮುಖ್ಯಮಂತ್ರಿಗಳಾದ ಶ್ರೀ ಚವಾಣ್‌ರವರು ನೂತನವಾಗಿರತಕ್ಕಂತಹ ಒಂದು ನೀತಿಯನ್ನು ಅಲ್ಲಿ ಸ್ಪಷ್ಟವಾಗಿ ಇಟ್ಟಿದ್ದಾರೆ, ಅದೇನೆಂದರೆ ನೂರು ಕೋಟಿ ರೂಪಾಯಿ ಹಣವನ್ನು ಕರ್ನಾಟಕಕ್ಕೆ ಕೊಡಲು ತಯಾರಿದ್ದೇವೆ ಇದಕ್ಕೆ ಬದಲಾಗಿ ಬೆಳಗಾಂ ನಗರವನ್ನು ಮಹಾರಾಷ್ಟ್ರಕ್ಕೆ ಬಿಟ್ಟು ಕೊಡುವ ವಿಚಾರವನ್ನು ಅವರು ಮಾಡಬೇಕು, ಬೆಳಗಾಂನ್ನು ಬಿಟ್ಟು ಕೊಡಬೇಕೆಂದು ಹೇಳಿದ್ದಾರೆ. ನೂರು ಕೋಟಿ ರೂಪಾಯಿಗೆ ಬೆಳಗಾಂ ನಗರವನ್ನು ವ್ಯಾಪಾರ ಮಾಡುವುದಲ್ಲ. ಕರ್ನಾಟಕದ ಗಡಿಯ ಹಿತರಕ್ಷಣೆಯನ್ನು ಕಾಪಾಡುವ ದೃಷ್ಟಿಯಿಂದ, ಅದನ್ನು ಹೊಂದಾಣಿಕೆ ಮಾಡಿಕೊಳ್ಳುವ ದೃಷ್ಟಿಯಿಂದ ಮಹಾಜನ್ ವರದಿಯನ್ನು ನಾವು ಒಪ್ಪಿಕೊಂಡಿದ್ದೇವೆಯೇ ಹೊರತು ಮಹಾರಾಷ್ಟ್ರಕ್ಕೆ ಮಾರಾಟ ಮಾಡುವಂತಹ ಜನ ಕರ್ನಾಟಕ ರಾಜ್ಯದಲ್ಲಿ ಇಲ್ಲ, ಇಲ್ಲವೇ ಮತ್ತೊಂದು ರಾಜ್ಯಕ್ಕೆ ಬೆಳಗಾಂ ಅನ್ನು ಮಾರಾಟ ಮಾಡುವಂತಹ ಜನ ಕರ್ನಾಟಕ ರಾಜ್ಯದವರು ಅಲ್ಲ. ಇದನ್ನು ನಾನು ಪದೇ ಪದೇ ಸ್ಪಷ್ಟಪಡಿಸುತ್ತಿದ್ದೇನೆ. ನಮ್ಮ ರಾಜ್ಯದ ಹಿತವನ್ನು ರಕ್ಷಣೆ ಮಾಡತಕ್ಕಂತಹ ಸಂದರ್ಭ ಬಂದಾಗ, ನಾನು ನನ್ನ ಧ್ವನಿಯನ್ನು ಒಕ್ಕೂರಲಿನಿಂದ ಇಟ್ಟಿದ್ದೇನೆ. ಶತಾಯಗತಾಯು ಇದನ್ನು ಕೊನೆಯವರೆಗೆ ಇದಕ್ಕೆ ಹೋರಾಟ ಮಾಡುತ್ತೇವೆ ಇದನ್ನು ನಮ್ಮ ನಡವಳಿಕೆಯಲ್ಲಿ ಇಟ್ಟುಕೊಳ್ಳುವುದಕ್ಕೆ ನಾವು ಸಿದ್ಧರಾಗಿದ್ದೇವೆ.. ಸರ್ವ ಪಕ್ಷಗಳ ಗಮನಕ್ಕೂ ಕೂಡ ಇದನ್ನು ತರುತ್ತಿದ್ದೇನೆ. ಮಹಾರಾಷ್ಟ್ರದ ಮಿತ್ರರು ಹೇಳಿದ ಹಾಗೆ ನೂರು ಕೋಟಿಯಾಗಬಹುದು ೧೫೦, ೫೦೦ ಕೋಟಿ ರೂಪಾಯಿಗೆ ಬರಬಹುದು. ನಮ್ಮ ಹಿತವನ್ನು ಬೆಲೆ ಕಟ್ಟಿ ವ್ಯವಹಾರ ಮಾಡತಕ್ಕಂತಹ ವಿಚಾರ ಇದು ಅಲ್ಲ. ನಮ್ಮ ಭಾವನೆ, ವಿಚಾರ ಧಾರೆಗಳನ್ನು ನಮ್ಮ ತನವನ್ನು ಬಿಟ್ಟು ಕೊಡಲು ನಾವು ತಯಾರಾಗಿಲ್ಲ. ನಮಗೆ ನಮ್ಮ ಭಾಷೆಯ ಬಗ್ಗೆ ಇರತಕ್ಕಂಥ ವ್ಯಾಮೋಹಕ್ಕಿಂತ ಇದು ಹೆಚ್ಚಿನದಲ್ಲ. ನಿಪ್ಪಾಣಿ ಇನ್ನಿತರ ಕೆಲವು ಭಾಗಗಳನ್ನು ಬಿಟ್ಟು ಕೊಡುವ ಔದಾರ್ಯವನ್ನು ನಾವು ತೋರಿಸಿದ್ದರೂ ಕೂಡ ಮಹಾರಾಷ್ಟ್ರದ ಮಿತ್ರರು ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲವೆಂದರೆ ನಮಗೆ ಬಹಳ ಖೇದವಾಗುತ್ತದೆ.

೧೨–೩೦ ಪಿ.ಎಂ.

ಇದರಿಂದ ನಮಗೆ ಬಹಳ ದುಃಖವಾಗುತ್ತದೆ ಬಹಳ ಖೇದವಾಗುತ್ತದೆ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಹುದೇ ವಿನಹ ನಾವು ಬೇರೆ ಯಾವುದೇ ವಿಚಾರಕ್ಕೂ ಅಲ್ಲಿಗೆ ಹೋಗಂತಿಲ್ಲ. ತಮಗೆ ಗೊತ್ತಿದ್ದಂತೆದೆಹಲಿಯ ಬೋಟ್ ಕ್ಲಬ್‌ನಲ್ಲಿ ಮಹಾರಾಷ್ಟ್ರದವರು ದೊಡ್ಡ ಚಳುವಳಿ ಮಾಡಬೇಕೆಂದು ಇದ್ದರು ನಾವು ಇಲ್ಲಿ ಎಲ್ಲರೂ ಚಳುವಳಿ ಮಾಡದೇ ಇದ್ದರೂ ಕೂಡಾ ಕೇಂದ್ರ ಸರ್ಕಾರದಲ್ಲಿರತಕ್ಕಂಥ ಪ್ರಧಾನಿಯವರ ಬಳಿ ಈ ವಿಚಾರವನ್ನು ಮನವರಿಕೆ ಮಾಡಿಕೊಂಡಿದ್ದೇವೆ. ಈ ವಿಷಯದಲ್ಲಿ ನಮ್ಮ ಕರ್ನಾಟಕದವರು ಯಾವಾಗಲೂ ಹಿಂದೆ ಬಿದ್ದಿಲ್ಲ.ಪ್ರಧಾನಿ ರಾಜೀವ್‌ಗಾಂಧಿಯವರ ಹತ್ತಿರ ನಮ್ಮ

ಪಕ್ಷದವರಲ್ಲಾ ಸಂದರ್ಭ ಬಂದಾಗಲೆಲ್ಲಾ ಮಾತನಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ವಿಚಾರದಲ್ಲಿ ಮಾತನಾಡಿದ್ದಾರೆ ಎಂದು ನಾವೆಲ್ಲಾ ಪತ್ರಿಕೆಗಳಲ್ಲಿ ಓದಿದ್ದೇವೆ. ಈಗಲೂ ನಮ್ಮ ಪ್ರಧಾನಿಯವರು ಈ ವಿಚಾರದ ಬಗ್ಗೆ ಗಮನ ಕೊಟ್ಟು ಈ ವಿಷಯವನ್ನು ಸೌಹಾರ್ದವಾಗಿ ಬಗೆಹರಿಸಬೇಕು ಎಂತ್ತು ಮಹಾಜನ್ ಆಯೋಗದ ವರದಿಯ ಆಧಾರದ ಮೇಲೆ ಇದನ್ನು ಬಗೆಹರಿಸಬೇಕು ಎನ್ನತಕ್ಕಂಥ ಒತ್ತಡ ಕೂಡಾ ಅವರ ಮೇಲಿದೆ. ಆ ಆಧಾರದಮೇಲೆ ನಾವು ಅನೇಕ ಭಾಗಗಳನ್ನು ಕಳೆದುಕೊಳ್ಳುತ್ತೇವೆ. ನೂರಾರು ಕೋಟಿ ರೂಪಾಯಿ ಬೆಲೆ ಬಾಳತಕ್ಕಂಥ ಭಾಗಗಳನ್ನು ನಾವು ಮಹಾರಾಷ್ಟ್ರಕ್ಕೆ ಕೊಡುತ್ತಿದ್ದೇವೆ ಎನ್ನತಕ್ಕಂಥ ಮಾತೂ ಕೂಡಾ ಅವರ ಗಮನದಲ್ಲಿದೆ. ಈ ಸಂದರ್ಭದಲ್ಲಿ ಕೇಂದ್ರ ಗೃಹಸಚಿವರಾದ ಬೂಟಾಸಿಂಗರು ಕೂಡಾ ಹೇಳಿದ್ದಾರೆ. ಈಗ ಬಂದಿರುವ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಬೇಕು ಎಂದು ಅವರೂ ಕೂಡಾ ಒಪ್ಪಿಕೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿದ್ದಾಗ ಜನತಾ ಪಕ್ಷ ಇದ್ದಾಗಲೂ ಕೂಡ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗಲಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇವೆಂದರೆ ಇದು ಸ್ವಲ್ಪ ಕ್ಲಿಷ್ಟಕರವಾಗಿರತಕ್ಕಂಥ ಸಮಸ್ಯೆ. ಇಲ್ಲಿ ಕೆಲವು ಭಾವನೆಗಳನ್ನು ಹತ್ತಿಕ್ಕತಕ್ಕಂಥ ಸಂದರ್ಭ ಬರಬಹುದು. ಆಲ್ಲಿ ತಡವಾಗಿರಬಹುದು, ಏನಾದರೂ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಕೇಂದ್ರಸರ್ಕಾರದವರು ಕೂಡಾ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ, ಈ ಮಾತನ್ನು ಈಗ ಇರತಕ್ಕಂಥ ಪ್ರಧಾನಿಯವರು ಕೂಡಾ ಶಾಂತಿಯುತವಾಗಿ ಸಮಸ್ಯೆಯನ್ನು ಬಗ್ಗೆಹರಿಸಬೇಕು ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಒಂದು ನೂರು ಕೋಟಿ ರೂಪಾಯಿ ವ್ಯವಹಾರದ ಬಗ್ಗೆ ಏನು ಮಾತನ್ನು ಆಡಿದ್ದಾರೆ, ಈ ಮಾತು ಮಾನ್ಯ ಚವಾಣ್ ಅವರ ಬಾಯಲ್ಲಿ ಬರಬರದಾಗಿತ್ತು. ಈ ಮಾತನ್ನು ಚವಾಣ್‌ಜೀ ಅವರು ಆಡಬಾರದಾಗಿತ್ತು ಅವರೇನೋ ಮಾತನಾಡಿದರು ಎಂದು ಒಂದು ಮಾತನ್ನು ನಾವು ಆಡುವುದು ಅದು ವಿಹಿತ ಅಲ್ಲ. ನಾವು ಕೇಳುತ್ತೇವೆ, ಬೊಂಬಾಯಿಯಲ್ಲಿ ಕೆಲವು ಭಾಗಗಳು ಇವೆ, ಆವುಗಳನ್ನು ಅವರು ಮಾರಾಟ ಮಾಡುತ್ತಾರೇನು ? ಅವರು ಆಡಿದ್ದಾರೆ ಎಂದು ನಾವೊಂದು ಆಡುವುದು ಸರಿಯಲ್ಲ. ಈ ದೃಷ್ಟಿಯಿಂದ ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಅಲ್ಲಿನ ಮಾನ್ಯ ಮುಖ್ಯಮಂತ್ರಿಗಳಾದವರು ಏನು ಇದ್ದಾರೆ, ಯಾವಾಗಲಾದರೂ ನಿಮ್ಮ ಹತ್ತಿರ ಈ ನೂರಾರು ಕೋಟಿ ರೂಪಾಯಿ ವ್ಯವಹಾರವನ್ನು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಹೇಳುವುದಕ್ಕಿಂತ ಮೊದಲು ಯಾವಾಗಲಾದರೂ ಹಣದ ವಿಚಾರದಲ್ಲಿ ಬೆಳಗಾಂ ನಗರದ ಬಗ್ಗೆ ಇರಬಹುದು, ಮತ್ತೊಂದು ಭಾಗದ ಬಗ್ಗೆ ಇರಬಹುದೂ, ಹಣಕ್ಕಾಗಿ ಈ ಭಾಗವನ್ನು ಬಿಡಿ ಎಂದು ಯಾವಾಗಲಾದರೂ ಈ ಮಾತು ಬಂದಿತ್ತೇ ? ಅಥವಾ ಕೇಂದ್ರಸರ್ಕಾರದವರು, ಏನಾದರೂ ಇದರ ಹಿಂದೆ ಇದ್ದಾರೆಯೇ ? ಅಥವಾ ಈ ವಿಚಾರವನ್ನು ಕೇಂದ್ರದಲ್ಲಿ ಹೇಳದೇ ಮತ್ತೊಂದು ರಾಜ್ಯಸರ್ಕಾರದ ಮುಂದೆ ಇಟ್ಟಿದ್ದಾರೋ ? ಈ ವಿವರಗಳೇನಾದರೂ ತಮಗೆ ಗೊತ್ತಿದ್ದರೆ ಹೇಳಬೇಕು. ಏಕೆಂದರೆ ಬೇರೆ ಬೇರೆ ಭಾಗಗಳಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರುಗಳು ಇದ್ದೇವೆ, ಈ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಡಬಹುದು. ಇದು ಒಳ್ಳೆಯದೋ ಎಂದೋ ಆಥವಾ ಸಲ್ಲದೋ ಎಂದೋ ನಮಗೆ ಒಪ್ಪಿಗೆಯಾಗಿಲ್ಲವೆಂದೋ ಈ ರೀತಿಯಾಗಿ ನಮ್ಮ ಅಭಿಪ್ರಾಯವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ಅಭಿಪ್ರಾಯ ಹೇಳಬಹುದಿತ್ತು. ಬೆಳಗಾಂ ನಗರದ ಯಾವುದೇ ಭಾಗ ತೆಗೆದುಕೊಂಡರೂ ಕೂಡಾ ಇದು ಬೆಳಗಾಂ ನಗರದ ಒಂದೇ ಪ್ರಶ್ನೆ ಅಲ್ಲ. ಯಾವುದು ಮಹಾಜನ್ ಆಯೋಗದ ವರದಿಯ ಪ್ರಕಾರ ಗಡಿಯಲ್ಲಿ ಬರುತ್ತದೆ, ಹೊಸ ಗಡಿಯಲ್ಲಿ ಬರುತ್ತದೆ. ಆದರ ಬಗ್ಗೆ ಅವರು ನೂರು ಕೋಟಿ ರೂಪಾಯಿ ಅಲ್ಲ, ಎಷ್ಟು ಕೋಟಿ ರೂಪಾಯಿಯನ್ನು ಕೊಟ್ಟರೂ ಬಿಡುವುದಕ್ಕೆ ನಾವು ತಯಾರಾಗಿಲ್ಲ. ಆದ್ದರಿಂದ ಇದನ್ನು ಯಾವುದೇ ಸಂದರ್ಭದಲ್ಲಿಯೂ ಒಪ್ಪಬಾರದು ಎನ್ನತಕ್ಕಂಥ ನಮ್ಮ ಪಕ್ಷದ ಸ್ಪಷ್ಟ ಅಭಿಪ್ರಾಯ ಮತ್ತು ನಮ್ಮೆಲ್ಲರ ಅಭಿಪ್ರಾಯ. I hope Government Will also agree and the Hon'ble Chief Minister, who is the Leader of the House, will also agree to this Proposal ಈ ವಿಚಾರದಲ್ಲಿ ಏನು ವಿವರಗಳು ಇವೆ ದಯಮಾಡಿ ಅವನ್ನು ಇದನಕ್ಕೆ ತಿಳಿಸಬೇಕು. ಈ ವಿಚಾರದ ಬಗ್ಗೆ ಏನು ವಿವರಗಳು ಇವೆ ಅವುಗಳ ಬಗ್ಗೆ ಮಾತನಾಡುವುದಕ್ಕೆ ಇದನ್ನು ನಿಲುವಳಿ ಸೂಚನೆಯಾಗಿ ತಾವು ಪರಿಗಣಿಸಿ ಚರ್ಚೆಗೆ ತಾವು ಎಲ್ಲಾ ಅವಕಾಶವನ್ನು ಮಾಡಿಕೊಡಬೇಕು ಎಂದು ಹೇಳಿದ್ದೇವೆ ಈ ವಿಚಾರವಲ್ಲಿ ನಾವು ವಿಸ್ತರವಾಗಿರತಕ್ಕಂಥ ನಿರ್ಣಯವನ್ನು ಕೂಡ ಕಳುಹಿಸಿಕೆಟ್ಟಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೂಡಾ ಗಮನ ಹರಿಸಬೇಕು. ಇದನ್ನು ತಮ್ಮಗಳ ಗಮನಕ್ಕೆ ತುದಿದ್ದೇವೆ, ಈ ರೀತಿ ಮಾಡಿದರೆ ನಮ್ಮ ರಾಜ್ಯದ ಹಿತವನ್ನು ನಮ್ಮ ನೆಲ ಮತ್ತು ಜಲದ ಹಿತವನ್ನು ಸದಾ ಕಾಯಲಿಕ್ಕೆ ಸರ್ವಶಕ್ತರಾಗುತ್ತೇವೆ.

ಇಲ್ಲದೇ ಇದ್ದರೆ ಜನತೆ ಯಾವ ನಂಬಿಕೆಯನ್ನು ನಿಮ್ಮ ಮೇಲೆ ಇಟ್ಟಿದ್ದಾರೆ, ಆ ನಂಬಿಕೆಗೆ ದ್ರೋಹ ಬಗೆದಂತಾಗುತ್ತದೆ ಎಂದು ಹೇಳುತ್ತೇನೆ. ಕರ್ನಾಟಕದ ಜನತೆಯ ಹಿತವನ್ನು ಬಲಿ ಕೊಡತಕ್ಕಂಥ ತೀರ್ಮಾನವನ್ನು ಏಕೆ ಈ ಸಂದರ್ಭದಲ್ಲಿ ಮಾಡಿದ್ದಾರೆ, ಕರ್ನಾಟಕದ ಜನತೆ ತಮ್ಮನ್ನು ಈ ತೀರ್ಮಾನದಿಂದ ಕ್ಷಮಿಸಲಾರರು ಮತ್ತು ಅವರು ಸುಮ್ಮನೆ ಕುಳಿತುಕೊಳ್ಳಲಾರರು ಎಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಮೊಯಿಲಿಯವರು ಮಾತನಾಡಿ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಗಡಿ ಮತ್ತು ಭಾಷೆಯ ವಿಚಾರದಲ್ಲಿ ನಾವು ಈ ಸದನದಲ್ಲಿ ಪ್ರಸ್ತಾಪ ಮಾಡುವಾಗ ಒಂದು ಇತಿಮಿತಿಯಿಂದ ಮಾತನಾಡುವುದು, ಇತಿಮಿತಿಯ ಚೌಕಟ್ಟನ್ನು ಅನುಸರಿಸಿಕೊಂಡು ..

ಶ್ರೀ ವೇದಾಂತ ಹೆಬ್ಬಿಗೆ.—ಅಧ್ಯಕ್ಷರೇ, ನಮಗೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಕೆಲವು ಮಾತುಗಳನ್ನು ಆಡುವುದಕ್ಕೆ ಇಚ್ಛಿಪಟ್ಟಿದ್ದೇವೆ. ನಮ್ಮ ಕನ್ನಡಿಗರು ಬಾಂಬೆಯಲ್ಲಿದ್ದಾರೆ, ಮಹಾರಾಷ್ಟ್ರದಲ್ಲಿ ಇದ್ದಾರೆ ಹಾಗೂ ಅನೇಕ ಕಡೆ ಇದ್ದಾರೆ. ಏಕೆಂದರೆ ಎರಡು ವರ್ಷಗಳ ಹಿಂದೆ ಭಾವೊದ್ರೇಕದಿಂದ ಮಾತನಾಡಿದ್ದಕ್ಕಾಗಿ ಅನಾಹುತ ಆಗಿದ್ದನ್ನು ನಾವು ನೋಡಿದ್ದೇವೆ, ಮತ್ತೆ ಆ ಅನಾಹುತ ನಡೆಯಬಾರದೆಂದು. ನಾವು ಈ ವಿಚಾರವನ್ನು ಈ ಮನೆಯಲ್ಲಿ ಮಾತನಾಡುವಾಗ ಒಂದು ವಿಚಾರವನ್ನು ಗಮನದಲ್ಲಿಸಿರಿಕೊಂಡಿದ್ದೇವೆ. ಮಹಾರಾಷ್ಟ್ರದ ವಿಧಾನಸಭೆಯಲ್ಲಿ ಈ ಒಂದು ವಿಚಾರದಲ್ಲಿ ಈ ಒಂದು ನಿರ್ಣಯ ಸರ್ವಾನುಮತದಿಂದ ಎಲ್ಲಾ ಪಕ್ಷಗಳವರೂ ಸೇರಿ ಮಾಡಿದ್ದಾರೆ ಬೆಳಗಾಂ ನಗರ ಮಹಾರಾಷ್ಟ್ರಕ್ಕೆ ಹೋಗಬೇಕು. ಈಗ ನಮಗೆ ಇಲ್ಲಿ ಏನು ಅನ್ನಿಸುತ್ತದೆ ಎಂದರೆ ಸುಮಾರು ೩೨ ವರ್ಷಗಳ ಮೇಲೆ ಇವೊತ್ತು ಕರ್ನಾಟಕದ ಒಂದು ಅವಿಭಾಜ್ಯ ಅಂಗವಾದಂತಹ ಬೆಳಗಾಂ ನಗರವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎನ್ನುವ ವಿಚಾರವನ್ನು ಎತ್ತಬೇಕಾದರೆ ಅದನ್ನು ಏಕೆ ಎತ್ತಿದರು ಎಂಬುದು ಪ್ರಶ್ನೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಮಾನ್ಯ ಚವಾಣ್‌ರವರಿಗೆ ಈ ಧೈರ್ಯ ಏಕೆ ಬಂತು ಎಂಬುದು ಪ್ರಶ್ನೆ.

ಅಧ್ಯಕ್ಷರು.—ತಾವು ಅಡ್‌ಜರ್ನ್‌ಮೆಂಟ್ ಮೋಷನ್ ಮೆರಿಟ್ಸ್ ಬಗ್ಗೆ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ನಮಗೆ ಏನು ಅನ್ನಿಸುತ್ತದೆ ಅಂದರೆ ಇವೊತ್ತು ಪ್ರಸ್ತಾಪಿಸಿದಂಥ ವಿಚಾರ ನಿಲುವಳಿ ಸೂಚನೆ ಮುಖಾಂತರ ಮಾತನಾಡುವುದಕ್ಕೆ ಅವಕಾಶವಿದೆ. ಬಹುಶಃ ಇದರಷ್ಟು ಗಂಭೀರವಾದ ವಿಷಯ ಬೇರೆ ಯಾವುದೂ ಇಲ್ಲ. ಬೆಳಗಾಂ ಇಷ್ಟು ಹಾಗೂ ಗಡಿ ವಿಚಾರ ಬಹಳ ಗಂಭೀರವಾದ ವಿಷಯ.

ಅಧ್ಯಕ್ಷರು.—ಇದು ನಿಲುವಳಿ ಸೂಚನೆ ಆಗುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕು ..

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಬಹಳ ಗಂಭೀರವಾದ ವಿಷಯವಾಗಿದೆ, ಈ ವಿಷಯ ಇಲ್ಲಿ ಪ್ರಸ್ತಾಪವಾಗುತ್ತಾ ಇದೆ. ಈ ಬಗ್ಗೆ ''ಹಿಂದೂ'' ಪತ್ರಿಕೆಯಲ್ಲಿ ಒಂದು ಸಂಪಾದಕೀಯ ಬಂದಿದೆ ಇದು ಬಹಳ ಗಂಭೀರವಾದ, ಗಹನವಾದ ವಿಚಾರ ಎಂದು ಹಿಂದೂ ಎಡಿಟೋರಿಯಲ್ಲಿ ಹೇಳಿದ್ದಾರೆ...

ಅಧ್ಯಕ್ಷರು.—ವಿಷಯ ಮಹತ್ವವೋ ಅಥವಾ ಇಲ್ಲವೋ ಎಂದು ಹೇಳುವುದಿಲ್ಲ ಇದು ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರುತ್ತದೆಯೋ ಎಂಬುದು ಮುಖ್ಯ ಅದಕ್ಕಾಗಿ ಅವಕಾಶ ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಗಡಿ ಮತ್ತು ಭಾಷೆಯ ವಿಚಾರದಲ್ಲಿ ಮಾತನಾಡುವಾಗ ಸಮಯದ ಚೌಕಟ್ಟಿನಲ್ಲಿ, ಇಲ್ಲಿ ಹೆಚ್ಚು ಮಾತುಗಳನ್ನು ಬೆಳೆಸದೆ ಯಾವುದೇ ಒಂದು ಭಾವೋದ್ರೇಕಕ್ಕೂ ಒಳಗಾಗದೆ ಇತಿಮಿತಿಯನ್ನು ಅರಿತುಕೊಂಡು ಮಾತನಾಡುತ್ತಾ ಇದ್ದೇನೆ. ಸಂಪಾದಕೀಯದಲ್ಲಿ ಏನು ಹೇಳುತ್ತಾರೆ ಅಂದರೆ.

> ''It is unclear as to why the Maharashtra Government has once again raked up the border dispute with Kardataka at this point of time unless it be that ths Chief Minister,

Mr. S.B. Chavan, who is under heavy political pressure..."

ಆದರಲ್ಲಿ ಕಾರಣ ಕೊಟ್ಟಿದ್ದಾರೆ. Why it is still not clear. ನಮ್ಮ ಕರ್ನಾಟಕ ಜನತೆಗೆ ಸೇರಿದ ನಗರವನ್ನು, ಮಾನ್ಯ ಸದಸ್ಯರುಗಳು ೧೨೦ ಕೋಟಿ ರೂಪಾಯಿಗೆ ಸೇರಿಸಿಕೊಳ್ಳಬಹುದು ಎನ್ನುವ ವಿಚಾರವನ್ನು ಹೇಳತಕ್ಕಂಥ ಈ ಒಂದು ಸೂಚನೆ ಏನು ಇದೆ, ಇದಕ್ಕೆ ಪೂರಕವಾದ ಪ್ರಚೋದನೆಗಳಿಗೆ ಏನು ಹಿನ್ನೆಲೆ ? ಅಥವಾ ಈ ಸೂಚನೆಯನ್ನು ಕರ್ನಾಟಕ ರಾಜ್ಯದವರ ದೌರ್ಬಲ್ಯವನ್ನು ತಿಳಿದುಕೊಂಡು ಅವರು ಮಾಡಿದ್ದಾರೆಯೇ ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ದೌರ್ಬಲ್ಯವನ್ನು ತೋರಿಸಿದ್ದಾರೆಯೇ, ಏನು ಹಿನ್ನೆಲೆಯಲ್ಲಿ ಇದು ನಡೆದಿದೆ. ಈ ಸದನದಲ್ಲಿ ಯಾವ ಸದಸ್ಯರನ್ನೂ ಗಮನಕ್ಕೆ ತೆಗೆದುಕೊಳ್ಳದೇ, ಸನ್ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಜನತೆಯನ್ನು ಗಣನೆಗೆ ತೆಗೆದು ಕೊಳ್ಳದೆ ಇದನ್ನು ಮಾಡಿದ್ದಾರೆಯೇ ಎನ್ನುವುದು ಅಸ್ಪಷ್ಟವಾದ ವಿಚಾರವಾಗಿ ಉಳಿದಿದೆ. ಮಾನ್ಯ ಅಧ್ಯಕ್ಷರೇ, ಈ ಬೆಳಗಾಂ ವಿಚಾರದಲ್ಲಿ ಇಲ್ಲಿ ಏನು ಹೇಳಿದ್ದಾರೆಂದರೆ,

> "The SRC went to the extent of saying that even if it is admitted that this town (Belgaum) has now a marathi majority in the view of the very slight Marathi majority in the taluk of Belgaum and the fact that economic relations are not particularly marked with any linguistic area, the future both of the taluk as well as the town should more appropriately be decided on administrative grounds."

ಇದೇ ವಿಚಾರದಲ್ಲಿ ಮತ್ತೊಂದು ಮಾತು ಏನು ಹೇಳಿದ್ದಾರೆಂದರೆ.—

> "The Commission observed that it was only the political workers who were carrying on agitation forgetting the good old principle of coexistence and tolerance."

ಆದ್ದರಿಂದ ಇದು ಒಂದು ರಾಜಕೀಯ ಚಳುವಳಿ ಆಗಿದೆ. ಬೆಳಗಾಂ ಮಹಾರಾಷ್ಟ್ರಕ್ಕೆ ಹೋಗಬೇಕು ಎಂಬುದನ್ನು ಇವೊತ್ತು ಅವರು ಪುನಃ ಎತ್ತುವುದಕ್ಕೆ ಏನು ಕಾರಣ ? ಈ ವಿಚಾರದಲ್ಲಿ ಡೆಕ್ಕನ್‌ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರುವ ಲೇಖನ ಈಗಾಗಲೇ ಎಲ್ಲರ ಗಮನವನ್ನು ಸೆಳೆದಿರಬಹುದು. ಇದನ್ನೆಲ್ಲಾ ನೋಡಿದಾಗ ಈ ಅಂಶಗಳನ್ನು ಕರ್ನಾಟಕದ ಜನತೆ ಸರಿಯಾಗಿ ಪರಿಶೀಲನೆ ಮಾಡಿತ್ತೋ ಅಥವಾ ಇಲ್ಲವೋ ಎಂಬ ಅನುಮಾನ ಬಂದಿದೆ. ಈ ನೂರು ಕೋಟಿ ರೂಪಾಯಿಗಳ ವ್ಯವಹಾರವನ್ನು ನಮ್ಮ ಮುಖ್ಯ ಮುಖ್ಯಮಂತ್ರಿಗಳು ಒಂದೇ ಮಾತಿನಲ್ಲಿ ಅಲ್ಲಗಳೆದಿದ್ದಾರೆ, ನೂರು ಕೋಟಿ ರೂಪಾಯಿಗಳು ಎಂದರೆ "I dismissed that proposal" ಎಂದು ಉತ್ತರ ಕೊಟ್ಟಿದ್ದಾರೆ: ಇದಕ್ಕೂ ಮೊದಲು ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನವನ್ನು ವಿತಕ್ಕೆ ವಿಶ್ವಾಸಕ್ಕೆ ತೆಗೆದುಕೊಳ್ಳಬಾರದಾಗಿತ್ತು ? ಈ ಹಿಂದೆ ಇಲ್ಲಿ ಗಡಿ ವಿಚಾರ ಬಂದಾಗ ಯಾವ ಪಕ್ಷದವರೇ ಅಧಿಕಾರದಲ್ಲಿರಲಿ ಯಾರೇ ಮುಖ್ಯಮಂತ್ರಿಗಳಾಗಿರಲಿ, ಯಾರೇ ವಿರೋಧಪಕ್ಷದ ನಾಯಕರಾಗಿರಲಿ, ಎಲ್ಲರೂ ಸೇರಿ ಒಂದು ಒಮ್ಮತದ ನಿರ್ಣಯವನ್ನು ತೆಗೆದುಕೆ ಳ್ಳಲಾಗುತ್ತಿತ್ತು. ಆದರೆ ಈಗ ಈ ವಿಚಾರದ ಬಗ್ಗೆ ಸಾಕಷ್ಟು ಸಂಶಯಗಳು ಬಂದು ಊಹಾಪೋಹಕ್ಕೆ ಎಡೆ ಮಾಡಿಕೊಟ್ಟಿದೆ. ಈ ಸದನದಲ್ಲಿ ಬೆಳಗಾಂ ವಿಚಾರ ಬಂದಾಗ, ಗಡಿ ವಿಚಾರ ಬಂದಾಗ We have been very specific, clear and we never used to give any room for any amoiguity ಎಂದು ತಾವು ಹೇಳುತ್ತಿದ್ದಿರಿ. ಆದರೆ ಇತ್ತೀಚೆಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ನೂರು ಕೋಟಿ ರೂಪಾಯಿಗಳ ವಿಚಾರ ಏನು ಪ್ರಸ್ತಾಪ ಮಾಡಿದ್ದಾರೆ, ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಜನತೆಯನ್ನು ಹಾಗೂ ವಿರೋಧ ಪಕ್ಷದ ಸದಸ್ಯರನ್ನು ವಿತಕ್ಕೆ ಮೊದಲೇ ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ಎಂಬ ಪ್ರಶ್ನೆ ಉದ್ಭವಾಗುತ್ತದೆ ? ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ಚವಾಣ್ ಅವರು ಬೆಳಗಾಂ ಬಗ್ಗೆ ಏನು ನೂರು ಕೋಟಿ ರೂಪಾಯಿಗಳ ಅಮಿಷವನ್ನು ತೋರಿಸಿದ್ದಾರೆ, ಈವಿಚಾರದಲ್ಲಿ ನಮ್ಮ ಕರ್ನಾಟಕ ರಾಜ್ಯದ ಜನತೆಯ ಮನಸ್ಸಿನಲ್ಲಿ ಸಾಕಷ್ಟು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಇಂತಹ ಅಪಸ್ವರ ಅವರಿಂದ ಉದ್ಭವಾಗಲು ಏನು ಕಾರಣ ? ಇದರಿಂದ ಶ್ರೀ ಚವಾಣ್ ಅವರು ಏನು ಲಾಭ ಮಾಡಿಕೊಂಡರೋ

ಗೊತ್ತಿಲ್ಲ. ಇಂತಹ ಆಮಿಷ ಕೋರಿಸಬೇಕಾದರೆ, ರಾಜಕೀಯ ಮುಖಂಡರಾದವರಿಗೆ ಸಾಗಷ್ಟು ಧೈರ್ಯ ಬೇಕಾಗುತ್ತದೆ. ಇಲ್ಲದಿದ್ದರೆ ಅವರು ಈ ತರಹದ ನಿರ್ಣಯವನ್ನು ಏತಕ್ಕೆ ತೆಗೆದುಕೊಳ್ಳುತ್ತಿದ್ದರು ?

ಅಧ್ಯಕ್ಷರು —ಇದು ನಿಲುವಳಿ ಸೂಚನೆಯಲ್ಲಿ ಬರುತ್ತದೆಯೇ ಅಥವಾ ಇಲ್ಲವೋ ಎಂಬ ಬಗ್ಗೆ ಮಾತ್ರ ತಾವು ಸೂಕ್ಷ್ಮವಾಗಿ ಹೇಳಿ. ನಾನು ಇದರ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಟ್ಟ ಮೇಲೆ ಎಲ್ಲರೂ ವಿವರವಾಗಿ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಒಹಳ ಗಂಭೀರವಾದ ವಿಚಾರವಾಗಿದೆ. ಈ ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿಚಾರವನ್ನು ಇವೊತ್ತು ನಿಲುವಳಿ ಸೂಚನೆ ರೂಪದಲ್ಲಿ ಏತಕ್ಕೆ ತರಲಾಗಿದೆ ಎಂಬುದರ ಹಿನ್ನೆಲೆಯನ್ನು ಮಾತ್ರ ನಾನು ಹೇಳುತ್ತಿದ್ದೇನೆ. ನೂರು ಕೋಟಿ ರೂಪಾಯಿಗಳ ಆಮಿಷವನ್ನು ಕೋರಿಸಬೇಕಾದರೆ ರಾಜಕೀಯ ಮುಖಂಡರಾದವರಿಗೆ ಬಹಳ ಧೈರ್ಯ ಬೇಕಾಗುತ್ತದೆ. ಈ ಕಡೆಯಿಂದ ಪ್ರತಿಸ್ಪಂದನ ಇಲ್ಲದಿದ್ದರೆ ಅವರು ಇಂತಹ ನಿರ್ಣಯವನ್ನು ಏತಕ್ಕೆ ತೆಗೆದುಕೊಳ್ಳುತ್ತಾರೆ ?

ಅಧ್ಯಕ್ಷರು.—ತಾವು ಈಗ ವಿವರಗಳಿಗೆ ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ನೂರು ಕೋಟಿ ರೂಪಾಯಿಗಳ ಪ್ರಪೋಸಲ್ ಏನಿದೆ ಇದರ ಗುಟ್ಟನ್ನು ಅವರು ಹೊರಪಡಿಸಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಈ ಒಂದು ಗುಟ್ಟನ್ನು ರಟ್ಟು ಮಾಡಿದ್ದಾರೆ, ಈ ಒಂದು ವಿಚಾರವನ್ನು ತಾವು ಏತಕ್ಕೆ ಇಲ್ಲಿಯವರೆಗೆ ಈ ಸದನದಲ್ಲಿ ಪ್ರಸ್ತಾಪ ಮಾಡಲಿಲ್ಲ ? ಇದರ ಒಂದು ಹಿನ್ನೆಲೆಯಲ್ಲಿ ತಾವು ಏತಕ್ಕೆ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ? "Mr. Chavan reveals 100 Cr. offer to Hegde". This is a new proposal that he has made. ಈ ವಿಚಾರವನ್ನು ತಾವು ಗುಟ್ಟಾಗಿ ಇಡಬೇಕಾದ ಅಗತ್ಯ ಏನಿತ್ತು ? ಇದೊಂದು ತಮಾಷೆಯ ಪ್ರಶ್ನೆ ಎಂದು ತಾವು ಭಾವಿಸಿಕೊಂಡಿರಬಹುದು. ಆದರೆ ಇದು ಅಂತಹ ತಮಾಷೆಯ ಪ್ರಶ್ನೆ ಅಲ್ಲ. Is it betraying the interest of the State? In Deccan Herald it has appeared as follows ;

> "The offer had been made to his counterpart, Mr. Ramakrishna Hegde, during one of their meetings in the past two years."
>
> "Admitting that at present his own party unit in Karnataka did not agree with him on the inclusion of the disputed areas in Maharashtra,....."

ಶ್ರೀ ಶರದ್ ಪವಾರ್‌ರವರು ಏನು ಹೇಳಿದ್ದಾರೆ. ಎಂದರೆ,

> He pointed out that Mr. Hegd had not kept his promise to the veteran Janatha party leaders Mr. S M. Joshi and N. G. Goray. He criticised the Karnataka Government for not implementing the three language formula.

ಇದು ಭಾಷೆಯ ವಿಚಾರ. ಈ ವಿಚಾರದಲ್ಲಿ ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಶರದ್‌ಪವಾರ್‌ರವರಿಗೆ ಮತ್ತು ಎನ್. ಜಿ. ಗೋರೆಯವರಿಗೆ ಏನು ಆಶ್ವಾಸನೆಯನ್ನು ಹೇಳಿದ್ದೀರಿ. ಎನ್ನುವುದನ್ನು ಹೇಳಬೇಕು. ಭಾಷೆಯ ವಿಚಾರ ಮಾತ್ರವಲ್ಲ, ಕರ್ನಾಟಕದ ಗಡಿ ಬಗ್ಗೆ ಕೂಡ ತಾವು ಏನಾದರೂ ಆಶ್ವಾಸನೆ ಕೊಟ್ಟಿದ್ದರೆ ಯಾವರೀತಿ ಆಶ್ವಾಸನೆ ಕೊಟ್ಟಿದ್ದೀರಿ ಎನ್ನುವುದನ್ನು ದಯಮಾಡಿ ಹೇಳಬೇಕು. ಇನ್ನು

> "Mr. Chavan said though Mr. Hegde had agreed in 1986 to remove by December 1986 compulsion in the teaching of Kannada in Marathi-medium schools at the primary level,

till date no effort had been made by the Karnataka Government to implement this commitment.''
Further,

''Expressing his readiness to seek new solutions to the problem, Mr. Chavan said a hypothetical solution could be a division of Belgaum between the two States. He pointed out that Belgaumitself had been formed out of five villages. The division could be along the railway track or the highway passing through the town. The Chief Minister said he had once again told Mr. Hegde that if Belgaum was conceded to Maharashtra, then the State was willing to gift as compensation Rs. 100 crore to Karnataka to build a new town.''

ಇದಂ ಒಂದು ಸೀರಿಯಂಸ್ ಆಫರ್. ನಮ್ಮ ಕಾಳಜಿ ಏನೆಂದರೆ, ಇದನ್ನು ನಮ್ಮ ಗಮನಕ್ಕೆ ತರಲಿಲ್ಲ, ಸದನದ ಗಮನಕ್ಕೂ ತರಲಿಲ್ಲ, ಕರ್ನಾಟಕದ ಜನತೆಯ ಗಮನಕ್ಕೂ ತರಲಿಲ್ಲ. ಬಹುಶಃ ಮೌನ ಕೆಲವು ಸಾರಿ ಸಮ್ಮತಿ ಲಕ್ಷಣವಾಗುತ್ತದೆ. ಆದರೆ ಈ ಬಾರ್ಡರ್ ಇಷ್ಯೂನಲ್ಲಿ ತಮ್ಮ ಮೌನ ಏನಿದೆ ಅದು ಕರ್ನಾಟಕಕ್ಕೆ ದುರಂತ ಆಗಬಾರದೂ ಅಷ್ಟೆ. ಬಾಕಿ ವಿಷಯದಲ್ಲಿ ಮೌನ ಸ್ವಾಟಜಿ ಮಾಡಿ. ಬಾರ್ಡರ್ ವಿಷಯದಲ್ಲಿ we want the open Chief Minister to champion the cause of Karnataka. ಈ ವಿಚಾರದಲ್ಲಿ ಮೌನಿ ಮುಖ್ಯಮಂತ್ರಿ ಬೇಡ ಈ ಬಗ್ಗೆ ನಾವು ಏನು ಹೇಳುತ್ತಾ ಇದ್ದೇವೆ ಅಂದರೆ ಇದರ ಬಗ್ಗೆ ದೀರ್ಘವಾಗಿ ಚರ್ಚೆಯಾಗಬೇಕು. ಅದಕ್ಕಾಗಿ ಈ ನಿಲುವಳಿ ಸೂಚನೆಗೆ ಪ್ರಾಮುಖ್ಯತೆ ಬಂದಿದೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಯಾದ ಚವಾಣರು ಹೆಚ್ಚಿನ ಲಾಭ ಪಡೆದರು, ಇವರ ಮೌನದ ದೌರ್ಬಲ್ಯವೊ ಅಥವಾ ರಾಜಕೀಯ ದೌರ್ಬಲ್ಯವೋ ನಮಗೆ ಗೊತ್ತಿಲ್ಲ. ಈ ದೌರ್ಬಲ್ಯವನ್ನು ದುರುಪಯೋಗ ಮಾಡಿಕೊಂಡು ಬೆಳಗಾಂ ಮಹಾರಾಷ್ಟ್ರಕ್ಕೆ ಹೋಗ ತಕ್ಕಂಥ ಪರಿಸ್ಥಿತಿ ಉದ್ಭವವಾಗಬಾರದು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ಕೊಡಬೇಕು. ಈ ಸದನವನ್ನು, ರಾಜ್ಯದ ಜನರು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಬೆಳಗಾಂ ನಮ್ಮ ರಾಜ್ಯದ ಅವಿಭಾಜ್ಯ ಅಂಗ. ಕರ್ನಾಟಕದ ಭಾಗಗಳನ್ನು ಮಹಾರಾಷ್ಟ್ರಕ್ಕೆ ಕೊಡತಕ್ಕಂಥ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಆದುದರಿಂದ ಇವತ್ತು ನಾವು ನಿರ್ಣಯ ಕೂಡ ತಂದಿದ್ದೇವೆ. ಸದನದ ಎಲ್ಲ ಪಕ್ಷಗಳೂ ಸರ್ವಾನುಮತದಿಂದ ನಿರ್ಣಯ ಮಾಡಬೇಕು. ಇದು ಬೆಳಗಾಂ ಆಗಲಿ, ಇನ್ನಿತರ ಭಾಗಗಳಾಗಲಿ ಅವು ಕರ್ನಾಟಕದ ಅವಿಭಾಜ್ಯ ಅಂಗವಾಗುತ್ತವೆ. ಮಾನ್ಯ ಬಂಗಾರಪ್ಪನವರು ಹೇಳಿದರು ಮಹಾಜನ್ ಕಮಿಷನ್ ವರದಿ ಪ್ರಕಾರ ನಿಷ್ಪಾಣಿ ಹೋಗುವುದಾದರೆ, ಕಾಸರಗೋಡು ಆ ಕಡೆ ಬರಬೇಕು. ಪರಸ್ಪರ ಸಮನ್ವಯ ಆಗಬೇಕು. ಒಂದು ಭಾಗವನ್ನು ಮಹಾರಾಷ್ಟ್ರಕ್ಕೆ ಬಿಟ್ಟು ಕೊಡುವುದು, ಇನ್ನೊಂದು ಭಾಗವನ್ನು ಬಿಡಲು ಕಮೀಷನ್ ಹೇಳಿಲ್ಲರೂ ಕೇಳದೇ ಇರತಕ್ಕ ಪರಿಸ್ಥಿತಿ ಆಗಬಾರದು. ಈ ವಿಚಾರದಲ್ಲಿ ಸದನದ ವಿಶ್ವಾಸವನ್ನು ತಾವು ತೆಗೆದುಕೊಳ್ಳಿ, ಬೆಳಗಾಂನ್ನು ಉಳಿಸಲಿಕ್ಕೆ ಎಲ್ಲರೂ ಸರ್ವಾನುಮತದಿಂದ ಬೆಂಬಲ ಕೊಡುತ್ತೇವೆ. ಆದರೆ, ತಾವು ಮೌನವ್ರತ ತೆಗೆದುಕೊಂಡು ಕರ್ನಾಟಕಕ್ಕೆ ಅನ್ಯಾಯ ಮಾಡುವುದಕ್ಕೆ ಹೋಗಬೇಡಿ. ತಮ್ಮ ಮೌನ ವ್ರತ ಕರ್ನಾಟಕಕ್ಕೆ ಮಾರಕವಾಗುವುದು ಬೇಡ. ಈ ವಿಷಯದಲ್ಲಿ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈಗ ಎತ್ತಿರುವಂಥ ವಿಷಯ ಪಾಪತ್ವದ ವಿಷಯ ಎನ್ನುವುದರಲ್ಲಿ ಎಗಡು ಅಭಿಪ್ರಾಯ ಇಲ್ಲ. ಹಿಂದೆ ಅನೇಕ ಸಲ ಈ ವಿಷಯದ ಬಗ್ಗೆ ಚರ್ಚೆಯಾಗಿದ್ದರೂ, ಇತ್ತೀಚೆಗೆ ಮಹಾರಾಷ್ಟ್ರ ಅಸೆಂಬ್ಲಿಯಲ್ಲಿ ಗೊತ್ತುವಳಿ ಪಾಸು ಮಾಡಿರುವುದರಿಂದ ಈ ವಿಷಯವನ್ನು ಪುನಃ ಅವರೇ ತೆರೆದಿದ್ದರಿಂದ ನಾವು ಇಲ್ಲಿ ಚರ್ಚೆ ಮಾಡುವುದರಲ್ಲಿ.ನನಗೆ ಯಾವ ಅಭ್ಯಂತರವೂ ಕಾಣುವುದಿಲ್ಲ. ಆದರೆ ಈ ವಿಷಯವನ್ನು ಯಾವರೀತಿ ಚರ್ಚೆ ಮಾಡಬೇಕೆಂಬುದನ್ನು ವಿರೋಧ ಪಕ್ಷದ ನಾಯಕರು ಇತರೇ ಸದಸ್ಯರು ತೀರ್ಮಾನ ಮಾಡಲಿ.

ನಿಲುವಳಿ ಸೂಚನೆ ಮುಖಾಂತರ ಮಾಡಿದರೆ, ಅದಕ್ಕೂ ಸ್ವಾಗತ ಗೊತ್ತುವಳಿ ಮೂಲಕ ಮಾಡಿದರೂ ಸ್ವಾಗತ. ಆದರೆ, ಎರಡನ್ನೂ ತೆಗೆದುಕೊಳ್ಳುವುದು ಬೇಡ.

ಶ್ರೀ ಕೆ. ಹೆಚ್. ಪಾಟೀಲ್.—ಠರಾವನ್ನು ಪಾಸು ಮಾಡುವುದಾದರೆ, ಠರಾವಿನ ಮೇಲೆಯೇ ಚರ್ಚೆಯಾಗಲಿ.

ಶ್ರೀ ರಾಮಕೃಷ್ಣ ಹೆಗಡೆ.—ನಿಲುವಳಿ ಸೂಚನೆ ಮೇಲೆ ಮಾತನಾಡಿದರೆ ಬಹಳ ಬೆಲೆ ಬರುತ್ತದೆಂದೇನೂ ಇಲ್ಲ. ಗೊತ್ತುವಳಿ ಮೇಲೆ ಮಾತನಾಡುವುದಾದರೆ ಸ್ವಲ್ಪ ತಿದ್ದುಪಡಿ ಮಾಡ ಬೇಕಾಗುತ್ತದೆ. ಇದನ್ನು ಹಾಗೆ ಪಾಸುಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಓದುತ್ತಿರುವುದು ಮೊದಲು ಕೊಟ್ಟಿರುವುದನ್ನು ಈಗ ಸ್ವಲ್ಪ ಬದಲಾವಣೆ ಮಾಡಿ ಕೊಟ್ಟಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ —ಇದರಲ್ಲಿರುವಂಥ ವಿರೋಧಾಭಾಸ ಏನೆಂದರೆ ''ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದ ಈಗಾಗಲೇ ಬಗೆಹರಿದಿದ್ದು, ಮಹಾಜನ್ ಆಯೋಗದ ತೀರ್ಮಾನವನ್ನು ಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ಎಂದು ಇದೆ.''

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಎರಡನೇ ಸಾರಿ ಬರೆದುಕೊಟ್ಟಿದ್ದೇವೆ, ನಿಮ್ಮ ಸೆಕ್ರೆಟೇರಿಯೇಟ್‌ನವರು ಕೊಡದಿದ್ದರೆ ಏನು ಹೇಳಬೇಕು ?

SRI S. BANGARPPA.—We are holding the view that there is no dispute ತಾವು ಏನು ಓದಿದಿರಿ. ಅದರ ಪ್ರಕಾರ ಕೂಡ ಮಹಾರಾಷ್ಟ್ರಕ್ಕೂ ನಮಗೂ ಯಾವುದೇ ತಂಟೆ ಇಲ್ಲ. We have made our position very very clear. ಮಹಾಜನ್ ಆಯೋಗದ ತೀರ್ಮಾನದ ಪ್ರಕಾರ ಕೂಡ ನಮ್ಮದ್ದು ಡಿಸ್‌ಪ್ಯೂಟ್ ಆದರ ಪ್ರಕಾರ ಡಿಸ್‌ಪ್ಯೂಟ್ ಇದೆ ಇದನ್ನು ಬೇರೊಂದು ರೂಪದಲ್ಲಿ ತಂದರೂ ಜಸ್ಟಿಫಿಕೇಷನ್ ಇಲ್ಲವೆಂದು ತಾವು ಹೇಳಿದ್ದೀರಿ. Please think over that.

ಶ್ರೀ ಕೆ ಹೆಚ್. ಪಾಟೀಲ್.— ಮಹಾಜನ್ ವರದಿಯನ್ನು ಪೂರ್ಣವಾಗಿ ಒಪ್ಪುವುದಾದರೆ ಒಪ್ಪಲಿ, ಇಲ್ಲದಿದ್ದರೆ status quo ಇರಲಿ ಎಂದು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.— ಅದಕ್ಕೆ ನಾನು ಒಪ್ಪುವುದಿಲ್ಲ, ಸ್ಟೇಟ್‌ಸ್‌ಕೋ ನಾವು ಒಪ್ಪುವುದಿಲ್ಲ, ಸ್ಟೇಟಸ್ ಕೋ ನಾವು ಒಪ್ಪಿಕೊಂಡಿಲ್ಲ ಕರ್ನಾಟಕಕ್ಕೆ ಅಪಾರವಾದಂಥ ಅನ್ಯಾಯವಾಗುತ್ತದೆ. ಅದು ಹೇಗೆ ಆಗುತ್ತದೆಂದು ನಾನು ಈಗಲೇ ಅದನ್ನು ಜರ್ಜೆ ಮಾಡಲಿಕ್ಕೆ ತಯಾರಿಲ್ಲ. ಇದರ ಬಗ್ಗೆ ತಮಗಿಂತಲೂ ಮಾನ್ಯ ಮೊಯಿಲಿಯವರಿಗೆ ಹೆಚ್ಚು ಮಾಹಿತಿ ಇದೆ. ಅವರು ಒಪ್ಪುತ್ತಾರೇನು ಕೇಳಿ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.— ಅಧ್ಯಕ್ಷರೆ, ತಮ್ಮ ಛೇಂಬರ್‌ನಲ್ಲೇ ಕರೆಯಿಸಿ, ಅಲ್ಲಿಯೇ ಎಲ್ಲರೂ ಚರ್ಚೆ ಮಾಡಿ ತೀರ್ಮಾನ ಮಾಡೋಣ.

ಶ್ರೀ ಬಿ, ಬಸವಲಿಂಗಪ್ಪ — ಅಧ್ಯಕ್ಷರೆ, ನಾವೆಲ್ಲಾ ಒಟ್ಟಿಗೆ ಸೇರಿ ಚರ್ಚೆ ಮಾಡಬಹುದು. ತಮ್ಮ ಛೇಂಬರ್‌ನಲ್ಲಿ ಕರೆಯಿಸಿ ಅಲ್ಲಿಯೇ ಎಲ್ಲರೂ ಸೇರಿ ಚರ್ಚೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೆ, ನಾನು ಒಂದು ಸಲಹೆ ಕೊಡುತ್ತೇನೆ, ಇವೊತ್ತು ಅಡ್ಜರ್ನ್‌ಮೆಂಟ್ ಮೋಷನ್ ಇದೆ, ಅಲ್ಲದೆ ರೆಸಲ್ಯೂಷನ್ ಸಹ ಇದೆ. ಈ ರೆಸಲ್ಯೂಷನ್‌ನಲ್ಲಿ ಯಾವ ರೀತಿ ಪದಗಳನ್ನು ಹಾಕಿಕೊಳ್ಳಬೇಕು, ಪರ್ಡಿಂಗ್ಸ್ ಯಾವ ರೀತಿ ಇರಬೇಕೆಂಬ ಬಗ್ಗೆ ಎಲ್ಲಾ ಪಕ್ಷದ ಮುಖಂಡರು ಸೇರಿ ಮಾಡಬೇಕಾಗುತ್ತದೆ. ಈ ಮಧ್ಯೆ ಪ್ರಾಮುಖ್ಯತೆಯ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಒಪ್ಪಿಕೊಂಡು ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುವುದಕ್ಕೆ We have no objection ಎಂದು ಹೇಳಿದ್ದಾರೆ ಈಗ ಚರ್ಚೆಯಾಗತಕ್ಕದ್ದು ಇದೇ ಧಾಟಿಯಲ್ಲಿ ಎರಡೂ ಕಡೆಯಿಂದ ಚರ್ಚೆ ನಡೆಯುತ್ತಿರಲಿ, ರೆಸಲ್ಯೂಷನ್ ಮೇಲೆ ಏನು ಚರ್ಚೆ ನಡೆಯುತ್ತದೆ. ಅದೇ ರೀತಿ ಅಡ್ಜರ್ನ್‌ಮೆಂಟ್ ಮೋಷನ್ ಮೇಲೂ ಮಾತನಾಡುತ್ತಾರೆ. ಈಗ ಚರ್ಚೆ ನಡೆಯುವುದು ನಡೆಯುತ್ತಿರಲಿ, ಈ ಮಧ್ಯೆ ನಾವೆಲ್ಲಾ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತುಕೊಂಡು

ಯಾವ ರೀತಿ ಪದಗಳು ಇರಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಂಡಮೇಲೆ ಅದನ್ನು ಸರ್ಕಾರದವರು ತಂದು ಮೂವ್ ಮಾಡಿದರೆ ಸಾಕು. ಚರ್ಚೆ ನಡೆಯುವುದು ನಡೆಯಲಿ ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಚರ್ಚೆ ನಡೆಯುತ್ತಿರಲಿ, ತಾವು ಪರ್ಡಿಂಗ್ಸ್ ಚೇಂಜ್ ಮಾಡಿಕೊಂಡು ಬನ್ನಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಮುಖ್ಯ ಮಂತ್ರಿಗಳು ಸಲಹೆ ಕೊಟ್ಟಿದ್ದಾರೆ. ಸರ್ಕಾರದ ಪರವಿಂದ ನಿರ್ಣಯ ತರುತ್ತೇವೆಂದು ಹೇಳಿದರು. ಇದರ ಬಗ್ಗೆ ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡೋಣ. ನಾವೇ ಅದನ್ನು ಮೂವ್ ಮಾಡುತ್ತೇವೆ. ಇದನ್ನು ನಾವು ತಮ್ಮ ಒಪ್ಪಿಗೆ ಪಡೆದುಕೊಂಡಮೇಲೆ ಮೂವ್ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.— ಸರ್ಕಾರದ ಪರವಾಗಿ ಮಾಡಬೇಡಿ. ಅಸೆಂಬ್ಲಿ ಪರವಾಗಿ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ — ಈಗ ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಒಪ್ಪಿಕೊಂಡರೆ, it is nothing but censuring the Government, ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆದರೆ ಈ ವಿಷಯದ ಗಂಭೀರತೆಯನ್ನು ಅರಿತು ಮಾಡಬೇಕಾಗುತ್ತದೆ. ಇದನ್ನು ಅಧ್ಯಕ್ಷರ ಕೊಠಡಿಯಲ್ಲಿ ಕುಳಿತುಕೊಂಡು ಚರ್ಚೆ ಮಾಡೋಣ. ಇದು ಇವೊತ್ತೇ ಆಗಲಿ. Today only it can be done. We will move it on that resolution we can discuss it.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:— ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ನೀವು ಲಾಜಿಕಲ್ ಕನ್‌ಕ್ಲೂಷನ್ ತೆಗೆದುಕೊಂಡು ಹೊರಟರೆ it may amount to censure of the Government. ಈ ವಿಚಾರದಲ್ಲಿ ಎಲ್ಲಾ ರಾಜಕೀಯ ಪಕ್ಷದವರು ಏಕಾಭಿಪ್ರಾಯವಿರುವುದರಿಂದ, the question of taking it to logical end does not arise at all. ನೀವು ಅದರ ಬಗ್ಗೆ ವಿಚಾರ ಮಾಡುವುದು ಬೇಡ. ಈಗ ಚರ್ಚೆ ಮಾಡುತ್ತೇವೆ. ಅಲ್ಲಿಗೆ ನಿಲ್ಲಿಸುತ್ತೇವೆ. ನೀವು ರೆಸಲ್ಯೂಷನ್ ಮೂವ್ ಮಾಡುತ್ತೀರಿ, ಪಾಸ್ ಮಾಡಿಕೊಳ್ಳುತ್ತೀರಿ, ಕ್ಲೋಸ್ ಮಾಡಿಕೊಳ್ಳುತ್ತೀರಿ .....

(ಗೊಂದಲ)

ಶ್ರೀ ಎಸ್ ಆರ್. ಬೊಮ್ಮಾಯಿ — ಅಡ್ಜರ್ನ್‌ಮೆಂಟ್ ಮೋಷನ್ ಡಿಸ್‌ಕಷನ್ ಆದಮೇಲೆ ಅಧ್ಯಕ್ಷರು ರಿಜೆಕ್ಟ್ ಮಾಡಿದರೆ ಸರಿಯಾಗುವುದಿಲ್ಲ. ಯಾವಾಗಲೂ ಇಂತಹ ವಿಚಾರದಲ್ಲಿ ರಿಜೆಕ್ಟ್ ಮಾಡಿದರೆ ರಿಫ್ಲೆಕ್ಷನ್ ಏನಾಗುತ್ತದೆಂದು ವಿಚಾರ ಮಾಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.— ಅಧ್ಯಕ್ಷರೆ ಒಂದನ್ನು ಪಾತ್ರ ತೆಗೆದುಕೊಳ್ಳಬಹುದು ಎರಡನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದೆ. ಈಗ ಒಕ್ಕಣಿ ಹೇಗಿದೆ. ಇಂತಹ ವಿಚಾರವನ್ನು ಚರ್ಚೆ ಮಾಡಬೇಕು ಆದ್ದರಿಂದ, ಇಂದಿನ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಬೇಕೆಂದು ಇದೆ, ಚರ್ಚೆ ಮುಗಿವ ತಕ್ಷಣ ತಾವು ಏನು ಮಾಡುತ್ತೀರಿ? ತಾವು ಅದನ್ನು ರಿಜೆಕ್ಟ್ ಮಾಡುತ್ತೀರಿ,

೧-೦೦ ಪಿ.ಎಂ.

ಅಂದರೆ ಈ ನಿಯಮಾವಳಿಯ ವಿಷಯಕ್ಕೆ ಯಾವ ಮಹತ್ವ ಇರಬೇಕಾಗಿತ್ತೋ ಆ ಮಹತ್ವ ಹೊರಟು ಹೋಗುತ್ತದೆ. ಇದರಿಂದ ನಿಮಗೆ ಮನಸ್ಸು ಸಮಾಧಾನವಾಗುವುದಾದರೆ ಈ ಠರಾವು ಬೇಕಾಗುವುದಿಲ್ಲ,

SRI K.H. PATIL:— Let us bring a unanimous resolution and pass.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇನ್ನೊಂದು ತಾಸಿನಲ್ಲಿ ಈ ಠರಾವನ್ನು ರೆಡಿ ಮಾಡಿ ಸಭೆಗೆ ಮಂಡಿಸಲಿ.

ಅಧ್ಯಕ್ಷರು.— ನಮ್ಮ ಛೇಂಬರಿಗೆ ಬನ್ನಿ, ಹೋಗೋಣ. ಅಲ್ಲಿ ಈ ರೆಸಲ್ಯೂಷನ್ ಅನ್ನು ಯಾವರೀತಿ ಡ್ರಾಫ್ಟ್ ಮಾಡಬೇಕು ಅನ್ನುವುದರ ಬಗ್ಗೆ ಚರ್ಚೆ ಮಾಡೋಣ. ಈ ನಿಲುವಳಿ ಸೂಚನೆ

ಯನ್ನು ನಾನು ತಿರಸ್ಕಾರ ಮಾಡಿದ್ದೇನೆ. ಮತ್ತೆ ಈ ರೆಸಲ್ಯೂಷನ್ (ಬಂದಾಗ ಬೇಕಾದರೆ ಚರ್ಚೆ ಮಾಡೋಣ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನನ್ನ ಇನ್ನೊಂದು ವಿಷಯ ಇತ್ತು. ಅದರ ಬಗ್ಗೆ ಹೇಳುತ್ತೀರಾ?

ಅಧ್ಯಕ್ಷರು.— ನಸ್ಟೀಂಬರ್‌ಗೆ ಬರಂತ್ತೀರಲ್ಲಾ ಆಗ ಮಾತನಾಡೋಣ. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

## ಗಮನ ಸೆಳೆಯುವ ಸೂಚನೆ

ಅಧ್ಯಕ್ಷರು.— ಶ್ರೀ ಆರ್. ವೆಂಕಟರಾಮಯ್ಯ (ಸದಸ್ಯರು ಹಾಜರಿಲ್ಲ)

### ಚಿಂತಾಮಣಿಯಲ್ಲಿ ನಡೆದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಕಣ್ಣು ಕಳೆದುಕೊಂಡವರಿಗೆ ಪರಿಹಾರ ಒದಗಿಸುವುದು.

ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಅಧ್ಯಕ್ಷರೆ ಚಿಂತಾಮಣಿಯಲ್ಲಿ ನಡೆಸಿದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಕಣ್ಣು ಹೋಗಿರುವವರಿಗೆ ಸರ್ಕಾರವು ಕೈಗೊಂಡಿರುವ ಪರಿಹಾರ ಕ್ರಮಗಳ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ನಾನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು) — ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಈಗಾಗಲೇ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆ ಇದೆ. ಮತ್ತೆ ಇದಕ್ಕೆ ಸಂಬಂಧಪಟ್ಟ ಹಾಗೆ ಒಬ್ಬರು ಆಂಧ್ರಪ್ರದೇಶದಲ್ಲಿ ಉನ್ನತ ಸೇವೆಯನ್ನು ಪಡೆದಿರುವ ಪದ್ಮಭೂಷಣ ಡಾ॥ ಸಿ.ಆರ್. ರೆಡ್ಡಿಯವರಿಗೆ ವಿಚಾರಣೆ ಮಾಡಿಯೆಂದು ಅವರನ್ನು ಕೇಳಿಕೊಂಡಿದ್ದೇವೆ. ಈ ಗಾಗಲೇ ಅವರು ಕಾರ್ಯರಂಭ ಮಾಡಿದ್ದಾರೆ. ಅದು ಬಂದ ಮೇಲೆ ನಾನು ಪೂರ್ಣವಾದ ಹೇಳಿಕೆಯನ್ನು ಕೊಡಲು ಸಾಧ್ಯವಾಗುತ್ತದೆ.

† ಶ್ರೀ ಬಿ. ಎಸ್. ಯಡಿಯೂರಪ್ಪ.— ಸನ್ಮಾನ್ಯ ಅಧ್ಯಕ್ಷರೆ, ಒಂದು ತುಂಬಾ ಗಂಭೀರವಾದ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇವತ್ತು ಇದು ಅತ್ಯಂತ ಗಂಭೀರವಾದ ಪ್ರಕರಣ ಸರ್ಕಾರಿ ನೇತ್ರ ಚಿಕಿತ್ಸಾ ವೈದ್ಯರು ನಂಬಿಕೆ ಕಳೆದುಕೊಳ್ಳುವಂತಹ ಸ್ಥಿತಿ ಇವೊತ್ತು ಬಂದಿದೆ. ಬೆಂಗಳೂರು ನಗರದ ಸಂಚಾರಿ ಕಣ್ಣಾಸ್ಪತ್ರೆ ಘಟಕದವರು ಜನವರಿ ೨೮, ೨೯ ರಂದು ಚಿಂತಾಮಣಿಯಲ್ಲಿ ನಡೆಸಿದ ಚಿಕಿತ್ಸೆಯ ನಂತರ ೬೫ ಜನರು ಕಣ್ಣುಗಳನ್ನು ಕಳೆದುಕೊಂಡಿದ್ದಾರೆ. ನಾನು ಪ್ರಸ್ತಾಪ ಮಾಡುತ್ತಿರುವುದು ಏಕಕ್ಕೆ ಅವರು ಕಣ್ಣು ಕಳೆದುಕೊಂಡರು, ಇದಕ್ಕೆ ಕಾರಣವೇನು ಎನ್ನುವುದಕೋಸ್ಕರವಲ್ಲ. ಈ ರೀತಿ ಆ ನಿರ್ಭಾಗ್ಯ ಜನರ ಮುಂದಿನ ಭವಿಷ್ಯವೇನು ? ೬೫ ಕುಟುಂಬದವರಿಗೆ ತಲೇನಾದರೂ ಸರಿಯಾದ ರೀತಿಯಲ್ಲಿ ತಿಂಗಳಿಗೆ ೫೦೦ ರೂಪಾಯಿಗಳನ್ನು ಮಾಸಾಶನ ಕೊಟ್ಟು ಅವರು ಬದುಕುವುದಕ್ಕೆ ದಾರಿ ಮಾಡಿ ಕೊಡುತ್ತೀರಾ ? ಅಲ್ಲಿರತಕ್ಕಂಥ ವೈದ್ಯಾಧಿಕಾರಿಗಳನ್ನು ಅಲ್ಲಿಂದ ವರ್ಗಾವಣೆ ಮಾಡಿದ್ದೀರಾ ? ಮತ್ತೆ ಆಪರೇಷನ್ ಆಗಿ ೬೫ ನಿಮಿಷದಲ್ಲಿ ಒಬ್ಬ ಸತ್ತಿದ್ದಾನೆ. ಅವನ ಮುಂದಿನ ಜೀವನದ ಹೆಂಡತಿ ಮಕ್ಕಳ ಭವಿಷ್ಯವೇನು ? ಅದರ ಬಗ್ಗೆ ಚರ್ಚೆಯಾಗಿಲ್ಲ. ತಾವು ಇವಕ್ಕೆ ಕೇವಲ ಒಂದು ಸಾವಿರ ರೂಪಾಯಿಗಳನ್ನು ಪರಿಹಾರ ಕೊಟ್ಟಿದ್ದೀರಿ. ಯಾವುದೇ ಕಾರಣಗಳಿಂದ ಇನ್ನು ಮುಂದೆ ಈ ರೀತಿ ಆಗಬಾರದೆಂದು ಸರ್ಕಾರಕ್ಕೆ ಇಚ್ಛೆಯಿದೆ, ನಾನು ಅದನ್ನು ಡೌಟ್ ಮಾಡುತ್ತಿಲ್ಲ. ಈ ಪ್ರಕರಣದ ಹಿನ್ನೆಲೆ ಏನು, ಇದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯುವುದಕೋಸ್ಕರ ಒಂದು ಸಮಿತಿ ಮಾಡಿ ಒಬ್ಬ ತಜ್ಞರನ್ನು ನೇಮಕ ಮಾಡಿ ವರದಿ ಕೊಡಿ ಎಂದು ಹೇಳಿದ್ದೀರಿ. ಅದರ ಬಗ್ಗೆ ಪ್ರಶ್ನೆ ಇಲ್ಲ. ನಾನು ಪ್ರಶ್ನೆ ಮಾಡುತ್ತಿರುವುದು ಒಂದೇ ಒಂದು ಉದ್ದೇಶ, ಏನೆಂದರೆ ೬೫ ಜನ ಏನು ಕಣ್ಣುಗಳನ್ನು ಕಳೆದುಕೊಂಡು ಬೀದಿ ಪಾಲಾಗಿದ್ದಾರೆ. ಅವರ ಕುಟುಂಬಗಳಿಗೆ ಸರಿಯಾದಂತಹ ಪರಿಹಾರ ಕೊಟ್ಟು